**National**
**Kannada**
**29.04.2025 / 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ರಕ್ಷಣಾ ಸಚಿವ, ರಾಷ್ಟ್ರೀಯ ಭದ್ರತಾ ಸಲಹೆಗಾರರೊಂದಿಗೆ ಸಭೆ ನಡೆಸಿದ ಪ್ರಧಾನಿ

೨. ಹಸಿರು ಜಲಜನಕ ಭವಿಷ್ಯದ ಇಂಧನ- ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

೩. ಚಾರ್‌ಧಾಮ್ ಯಾತ್ರೆ ನಾಳೆಯಿಂದ ಆರಂಭ

೪. ಮಹಿಳಾ ಏಕಿದಿನ ಕ್ರಿಕೆಟ್; ದಕ್ಷಿಣಾ ಆಫ್ರಿಕಾ ವಿರುದ್ಧ ೧೫ ರನ್‌ಗಳ ರೋಚಕ ಗೆಲುವು ದಾಖಲಿಸಿದ ಭಾರತದ ಮಹಿಳಾ ತಂಡ

೫. ಐಪಿಎಲ್ ಟಿ-೨೦ ಕ್ರಿಕೆಟ್; ಕೊಲ್ಕತ್ತಾ ನೈಟ್‌ರೈಡರ್ಸ್ ವಿರುದ್ಧ ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ಫೀಲ್ಡಿಂಗ್ ಆಯ್ಕೆ

**<><*<><>*><>**

ಪ್ರಧಾನಿ ನರೇಂದ್ರ ಮೋದಿ ಅವರು, ನವದೆಹಲಿಯ ತಮ್ಮ ನಿವಾಸದಲ್ಲಿಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರೊಂದಿಗೆ ಸಭೆ ನಡೆಸಿದರು. ಭಾರತೀಯ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಅನಿಲ್ ಚೌಹಾಣ್ ಹಾಗೂ ಭಾರತೀಯ ಮೂರು ಸೇನೆಗಳ ಮುಖ್ಯಸ್ಥರು ಸಭೆಯಲ್ಲಿ ಭಾಗವಹಿಸಿದ್ದರು. ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಈ ಸಭೆ ನಡೆಯಿತು.

**<><*<><>*><>**

೨೧ನೇ ಶತಮಾನದ ಅಗತ್ಯಗಳನ್ನು ಪೂರೈಸಲು ಕೇಂದ್ರ ಸರ್ಕಾರ ದೇಶದ ಶಿಕ್ಷಣ ವ್ಯವಸ್ಥೆಯನ್ನು ಆಧುನೀಕರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯ ಭಾರತ್ ಮಂಟಪಂನಲ್ಲಿ ನಡೆದ ಯುಗ್ಮ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕೇಂದ್ರ ಸರ್ಕಾರ ವಿಶ್ವದರ್ಜೆಯ ಜ್ಞಾನವನ್ನು ದೇಶದ ಪ್ರತಿಯೊಬ್ಬ ವಿದ್ಯಾರ್ಥಿಯ ಕೈಗೆಟುಕುವಂತೆ ಕ್ರಮ ಕೈಗೊಳ್ಳುತ್ತಿದೆ. ದೇಶದ ಭವಿಷ್ಯ ಯುವಜನತೆಯ ಮೇಲೆ ಅವಲಂಬಿತವಾಗಿದ್ದು, ಅವರನ್ನು ಉಜ್ವಲ

ಭವಿಷ್ಯಕ್ಕಾಗಿ ಸಿದ್ಧಪಡಿಸುವುದು ನಿರ್ಣಾಯಕವಾಗಿದೆ. ನೂತನ ಶಿಕ್ಷಣ ನೀತಿ ದೇಶದಲ್ಲಿ ಪರಿವರ್ತನೆಯನ್ನು ತಂದಿದೆ ಎಂದರು. ಸಂಸ್ಕೃತದಲ್ಲಿ ಸಂಗಮ ಎಂಬ ಅರ್ಥವನ್ನು ನೀಡುವ ಈ ಸಮಾವೇಶ, ಸರ್ಕಾರ, ಶೈಕ್ಷಣಿಕ, ಕೈಗಾರಿಕೆ ಮತ್ತು ನಾವೀನ್ಯಕಾರರ ನಾಯಕರನ್ನು ಒಂದೇ ವೇದಿಕೆಯಡಿ ಒಟ್ಟುಗೂಡಿಸುವ ಮೊದಲ ಕಾರ್ಯತಂತ್ರದ ಸಮಾವೇಶವಾಗಿದೆ. ವಾಧ್ವನಿ ಪ್ರತಿಷ್ಠಾನ ಮತ್ತು ಸರ್ಕಾರಿ ಸಂಸ್ಥೆಗಳ ಸುಮಾರು ಒಂದು ಸಾವಿರ ೪೦೦ ಕೋಟಿ ರೂಪಾಯಿಗಳ ಜಂಟಿ ಹೂಡಿಕೆಯೊಂದಿಗೆ ನಡೆಯುವ ಈ ಸಮಾವೇಶ, ದೇಶದ ನಾವೀನ್ಯತೆಯ ಪಯಣಕ್ಕೆ ಕೊಡುಗೆ ನೀಡಲಿದೆ. ದೇಶದ ನಾವೀನ್ಯತೆ ಪರಿಸರ ವ್ಯವಸ್ಥೆಯಲ್ಲಿ ದೊಡ್ಡ ಪ್ರಮಾಣದ ಖಾಸಗಿ ಹೂಡಿಕೆಯನ್ನು ವೇಗಗೊಳಿಸಲು, ಶೈಕ್ಷಣಿಕ-ಉದ್ಯಮ-ಸರ್ಕಾರಿ ಪಾಲುದಾರಿಕೆಗಳನ್ನು ಬಲಪಡಿಸಲು ಮತ್ತು ವಿಕಸಿತ ಭಾರತದ ದೃಷ್ಟಿಕೋನಕ್ಕೆ ಅನುಗುಣವಾಗಿ ನಾವೀನ್ಯತೆಗೆ ವೇಗ ನೀಡುವ ಗುರಿಯನ್ನು ಸಮಾವೇಶ ಹೊಂದಿದೆ. ಸಮಾವೇಶ ಸರ್ಕಾರಿ ಅಧಿಕಾರಿಗಳು, ಉನ್ನತ ಕೈಗಾರಿಕೆ ಮತ್ತು ಶೈಕ್ಷಣಿಕ ಕ್ಷೇತ್ರದ ಗಣ್ಯರನ್ನು ಒಳಗೊಂಡ ಉನ್ನತ ಮಟ್ಟದ ದುಂಡುಮೇಜಿನ ಸಭೆಗಳು ಮತ್ತು ಚರ್ಚೆಗಳನ್ನು ಒಳಗೊಂಡಿರಲಿದೆ.

<><*<><>*><>

ಹಸಿರು ಜಲಜನಕ ಭವಿಷ್ಯದ ಇಂಧನ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ನವದೆಹಲಿಯಲ್ಲಿಂದು MSME ಗಳಿಗೆ ರಾಷ್ಟ್ರೀಯ ಹಸಿರು ಜಲಜನಕ ಮಿಷನ್ ಅವಕಾಶಗಳ ಕುರಿತು ಕಾರ್ಯಾಗಾರವನ್ನು ಉದ್ಘಾಟಿಸಿದ ಸಚಿವರು, ಹಸಿರು ಜಲಜನಕ ಉತ್ಪಾದನೆಯಲ್ಲಿ ತಂತ್ರಜ್ಞಾನ ಅಭಿವೃದ್ಧಿಗಾಗಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಸಹಕರಿಸಬೇಕೆಂದು ಒತ್ತಾಯಿಸಿದರು. MSME ಗಳು ಉತ್ಪಾದನೆ, ಎಂಜಿನಿಯರಿಂಗ್‌ಗೆ ನಿರ್ಣಾಯಕ ಬೆಂಬಲವನ್ನು ನೀಡುವ ಶಕ್ತಿಯನ್ನು ಹೊಂದಿವೆ. ನವೀಕರಿಸಬಹುದಾದ ಇಂಧನದತ್ತ ಭಾರತವನ್ನು ಸಬಲೀಕರಣಗೊಳಿಸುವ ಹೊಸ ತಾಂತ್ರಿಕ ವಿಚಾರಗಳೊಂದಿಗೆ ಬರುತ್ತವೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ, ಸಚಿವರು ಭಾರತದ ಹಸಿರು ಜಲಜನಕ ಪ್ರಮಾಣೀಕರಣ ಯೋಜನೆಯನ್ನು ಸಹ ಪ್ರಾರಂಭಿಸಿದರು. ಈ ಪ್ರಮಾಣೀಕರಣ ಯೋಜನೆಯು ದೇಶದಲ್ಲಿ ಹಸಿರು ಜಲಜನಕ ಉತ್ಪಾದನೆಯನ್ನು ಖಚಿತಪಡಿಸುತ್ತದೆ ಎಂದು ಅವರು ಹೇಳಿದರು. ಭಾರತವು ಜಪಾನ್‌ನೊಂದಿಗೆ ನಾಲ್ಕು ಲಕ್ಷ ೧೨ ಸಾವಿರ ಟನ್ ಹಸಿರು ಜಲಜನಕ ಉತ್ಪನ್ನಗಳಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ೨೦೩೦ ರ ವೇಳೆಗೆ ಸಚಿವಾಲಯವು ಅದನ್ನು ಐದು ಮಿಲಿಯನ್ ಟನ್‌ಗಳಿಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

<><*<><>*><>

ಭಾರತದ ಅತ್ಯಂತ ಪವಿತ್ರ ತೀರ್ಥಯಾತ್ರೆಯಲ್ಲಿ ಒಂದಾದ ಉತ್ತರಾಖಂಡದಲ್ಲಿ ನಡೆಯುವ ಚಾರ್‌ಧಾಮ್ ಯಾತ್ರೆ ನಾಳೆ ಅಕ್ಷಯ ತೃತೀಯದ ಶುಭ ಸಂದರ್ಭದಲ್ಲಿ ಆರಂಭವಾಗಲಿದೆ. ಉತ್ತರ ಕಾಶಿ ಜಿಲ್ಲೆಯ ಗಂಗೋತ್ರಿ ಮತ್ತು ಯಮುನೋತ್ರಿ ದೇವಾಲಯಗಳ ಬಾಗಿಲು ತೆರೆಯುವುದರೊಂದಿಗೆ ಯಾತ್ರೆ ಆರಂಭವಾಗಲಿದೆ. ರುದ್ರಪ್ರಯಾಗ್ ಜಿಲ್ಲೆಯ ಕೇದರಾನಾಥ ದೇವಾಲಯದ ದ್ವಾರಗಳು ಮೇ ೨ ರಂದು ಹಾಗೂ ಚಮೋಲಿ ಜಿಲ್ಲೆಯ ಬದರಿನಾಥ್ ಧಾಮದ ಬಾಗಿಲುಗಳು ಮೇ ೪ ರಂದು ತೆರಯಲಿದೆ. ವೈದಿಕ ಸ್ತೋತ್ರಗಳು ಮತ್ತು ಇತರೆ ಧಾರ್ಮಿಕ ಆಚರಣೆಗಳ ನಡುವೆ ಗಂಗೋತ್ರಿ ಮತ್ತು ಯಮುನೋತ್ರಿ ದೇವಾಲಯಗಳ ದ್ವಾರಗಳು ನಾಳೆ ತೆರೆಯಲಿವೆ. ಯಾತ್ರಿಕರ ಅನುಕೂಲಕ್ಕಾಗಿ ಉತ್ತರಾಖಂಡ ಸರ್ಕಾರ, ಸಕಲ ಸಿದ್ಧತೆ ಕೈಗೊಂಡಿದೆ. ಭದ್ರತೆ, ಸಂಚಾರ ನಿರ್ವಹಣೆ, ಜನಸಂದಣಿ ನಿಯಂತ್ರಣ, ಆರೋಗ್ಯ ಮತ್ತು ನೈರ್ಮಲ್ಯದ ಮೇಲೆ ವಿಶೇಷ ಗಮನ ಹರಿಸಲು ಕ್ರಮ ಕೈಗೊಳ್ಳಲಾಗಿದೆ. ಚಾರ್‌ಧಾಮ್ ಯಾತ್ರೆಗೆ ದೇಶ ಮತ್ತು ವಿದೇಶಗಳಿಂದ ಪ್ರತಿ ವರ್ಷ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ.

<><*<><>*><>

ಪವಿತ್ರ ಹಜ್ ಯಾತ್ರೆ ಕೈಗೊಳ್ಳುತ್ತಿರುವ ಎಲ್ಲ ಒಂದು ಲಕ್ಷ ೨೨ ಸಾವಿರದ ೫೧೮ ಯಾತ್ರಿಕರಿಗೆ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಶುಭಾಶಯ ಕೋರಿದ್ದಾರೆ. ಮೊದಲ ಹಂತದಲ್ಲಿ ಲಕ್ನೋದಿಂದ ೨೮೮ ಯಾತ್ರಿಕರು ಹಾಗೂ ಹೈದರಾಬಾದ್‌ನಿಂದ ೨೬೨ ಯಾತ್ರಿಕರು ಇಂದು ಹಜ್‌ಗೆ ಪ್ರಯಾಣ ಬೆಳೆಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಸಚಿವ ಕಿರಣ್ ರಿಜಿಜು, ಕೇಂದ್ರ ಸರ್ಕಾರ ಸುಗಮ ಮತ್ತು ತಡೆ ರಹಿತ ಹಜ್ ಯಾತ್ರೆಯನ್ನು ಖಚಿತಪಡಿಸಿಕೊಳ್ಳಲು ಬದ್ಧವಾಗಿದೆ ಎಂದು ಹೇಳಿದರು. ಇದೇ ವೇಳೆ ಹಜ್ ಯಾತ್ರಿಕರ ಸುರಕ್ಷಿತ ಮತ್ತು ಆಧ್ಯಾತ್ಮಿಕವಾಗಿ ಸಮೃದ್ಧ ಪ್ರಯಾಣಕ್ಕಾಗಿ ಸಚಿವ ಕಿರಣ್ ರಿಜಿಜು ಪ್ರಾರ್ಥಿಸಿದರು.

<><*<><>*><>

ಗ್ರೀಸ್ ವಿದೇಶಾಂಗ ಸಚಿವ ಜಾರ್ಜ್ ಗೆರಾಪೆಟ್ರೈಟಿಸ್ ಅವರೊಂದಿಗೆ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಮಾತುಕತೆ ನಡೆಸಿದರು. ಉಭಯ ನಾಯಕರು, ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಗ್ಗೆ ಚರ್ಚಿಸಿದರು. ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧ ಗ್ರೀಸ್‌ನ ಬಲವಾದ ನಿಲುವು ಶ್ಲಾಘಿಸಿದ ಸಚಿವ ಡಾ.ಎಸ್.ಜೈಶಂಕರ್, ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯು ಸಂಬಂಧಗಳ ಬಲಿಷ್ಠತತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

<><*<><>*><>

ಕೆನಡಾದ ಪ್ರಧಾನಿಯಾಗಿ ಲಿಬರಲ್ ಪಕ್ಷದ ಮಾರ್ಕ್ ಕಾರ್ನಿ ಆಯ್ಕೆಯಾಗಿದ್ದಾರೆ. ಗೆಲುವಿಗಾಗಿ ಮಾರ್ಕ್ ಕಾರ್ನಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ಪ್ರಜಾಪ್ರಭುತ್ವ ಮೌಲ್ಯಗಳು, ಕಾನೂನಿನ ನಿಯಮಕ್ಕೆ ದೃಢವಾದ ಬದ್ಧತೆ ಮತ್ತು ಜನರ ನಡುವಿನ ಸಂಬಂಧಗಳಿಂದ ಭಾರತ ಮತ್ತು ಕೆನಡಾ ಬದ್ಧವಾಗಿವೆ. ಉಭಯ ದೇಶಗಳ ನಡುವಿನ ಪಾಲುದಾರಿಕೆಯನ್ನು ಬಲಪಡಿಸಲು ಮಾರ್ಕ್ ಕಾರ್ನಿ ಅವರೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ತಿಳಿಸಿದ್ದಾರೆ.

<><*<><>*><>

ಟ್ರಿನಿಡಾಡ್ ಮತ್ತು ಟೊಬೆಗೊ ಪ್ರಧಾನಿಯಾಗಿ ಯುನೈಟಡ್ ನ್ಯಾಷನಲ್ ಕಾಂಗ್ರೆಸ್‌ನ ಕಮಲಾ ಪ್ರಸಾದ್-ಬಿಸ್ಸೆಸ್ಸರ್ ಆಯ್ಕೆಯಾಗಿದ್ದಾರೆ.  ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಕ್ಕಾಗಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.  ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ ಮೋದಿ, ಭಾರತವು ಟ್ರಿನಿಡಾಡ್ ಮತ್ತು ಟೊಬೆಗೊ ಜೊತೆ ಐತಿಹಾಸಿಕವಾಗಿ ನಿಕಟ ಸಂಬಂಧಗಳನ್ನು ಹೊಂದಿದೆ.  ಟ್ರಿನಿಡಾಡ್ ಮತ್ತು ಟೊಬೆಗೊದೊಂದಿಗೆ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಕಮಲಾ ಪ್ರಸಾದ್-ಬಿಸ್ಸೆಸ್ಸರ್ ಅವರೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ ಎಂದು ಹೇಳಿದ್ದಾರೆ.

<><*<><>*><>

ಭಾರತದ ಕೈಗಾರಿಕಾ ಉತ್ಪಾದನಾ ಬೆಳವಣಿಗೆ ಕಳೆದ ಮಾರ್ಚ್‌ನಲ್ಲಿ ಶೇಕಡ ೩ ರಷ್ಟು ಏರಿಕೆ ದಾಖಲಿಸಿದೆ. ಕೈಗಾರಿಕಾ ಉತ್ಪಾದನಾ ಸೂಚ್ಯಂಕ- ಐಐಪಿ ಪ್ರಕಾರ, ಫೆಬ್ರವರಿಯಲ್ಲಿ ಪರಿಷ್ಕೃತ ಬೆಳವಣಿಗೆಯ ದರ ಶೇಕಡ ೨.೭ ರಷ್ಟಿತ್ತು. ಕೇಂದ್ರ ಅಂಕಿ-ಅಂಶಗಳು ಮತ್ತು ಯೋಜನಾ ಅನುಷ್ಠಾನ ಸಚಿವಾಲಯ ಬಿಡುಗಡೆಗೊಳಿಸಿರುವ ಅಂಕಿ-ಅಂಶಗಳ ಪ್ರಕಾರ, ಐಐಪಿಯ ಮೂರು ಪ್ರಮುಖ ಅಂಶಗಳಲ್ಲಿ, ವಿದ್ಯುತ್ ಉತ್ಪಾದನೆ ಶೇಕಡ ೬.೩ ರಷ್ಟು, ಉತ್ಪಾದನೆ ಶೇಕಡ ೩ ರಷ್ಟು ಬೆಳವಣಿಗೆ ಕಂಡರೆ, ಗಣಿಗಾರಿಕೆ ಚಟುವಟಿಕೆಗಳು ಮಾರ್ಚ್‌ನಲ್ಲಿ ಹಿಂದಿನ ತಿಂಗಳಿಗೆ ಹೋಲಿಸಿದರೆ, ಶೇಕಡ ೦.೪ ರಷ್ಟು ಹೆಚ್ಚಾಗಿದೆ. ಬಳಕೆ ಆಧಾರಿತ ವರ್ಗೀಕರಣದ ಪ್ರಕಾರ, ಐಐಪಿಯ ಅನುಗುಣವಾದ ಬೆಳವಣಿಗೆಯ ದರಗಳು ಮಾರ್ಚ್ ೨೦೨೪ಕ್ಕೆ ಹೋಲಿಸಿದರೆ ೨೦೨೫ರ ಮಾರ್ಚ್‌ನಲ್ಲಿ ಪ್ರಾಥಮಿಕ ಸರಕುಗಳಲ್ಲಿ ಶೇಕಡ ೩.೧ ರಷ್ಟು, ಬಂಡವಾಳ ಸರಕುಗಳಲ್ಲಿ ಶೇಕಡ ೨.೪ ರಷ್ಟು, ಮಧ್ಯಂತರ

ಸರಕುಗಳಲ್ಲಿ ಶೇಕಡ ೨.೩ ರಷ್ಟು, ಮೂಲಸೌಕರ್ಯ ಅಥವಾ ನಿರ್ಮಾಣ ಸರಕುಗಳಲ್ಲಿ ಶೇಕಡ ೮.೮ ರಷ್ಟು ಕೈಗಾರಿಕಾ ಉತ್ಪಾದನಾ ಸೂಚ್ಯಂಕ ದರ ದಾಖಲಿಸಿದೆ.

**<><*<><>*><>**

ಕೊಲೊಂಬೋದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಇಂದು ನಡೆದ ಮಹಿಳಾ ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ಮಹಿಳಾ ತಂಡ ೧೫ ರನ್‌ಗಳ ರೋಚಕ ಗೆಲುವು ದಾಖಲಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಭಾರತ ಮಹಿಳಾ ತಂಡ, ನಿಗದಿತ ೫೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೨೭೬ ರನ್ ಗಳಿಸಿತು. ಈ ಗುರಿಯನ್ನು ಬೆನ್ನತ್ತಿದ ದಕ್ಷಿಣ ಆಫ್ರಿಕಾ ಮಹಿಳಾ ತಂಡ, ೪೯.೨ ಓವರ್‌ಗಳಲ್ಲಿ ೨೬೧ ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು ಪರಾಭವಗೊಂಡಿತು.

**<><*<><>*><>**

ದೆಹಲಿಯ ಅರುಣ್‌ಜೇಟ್ಲಿ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಕೊಲ್ಕತ್ತಾ ನೈಟ್‌ರೈಡರ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

**<><*<><>*><>**

ಮುಂಬೈ ಷೇರು ಮಾರುಕಟ್ಟೆಯಲ್ಲಿ ಷೇರು ಸಂವೇದಿ ಸೂಚ್ಯಂಕ- ಸೆನ್ಸೆಕ್ಸ್ ೭೦ ಅಂಕಗಳು ಏರಿಕೆಯಾಗಿದ್ದು, ದಿನದ ಅಂತ್ಯಕ್ಕೆ ೮೦ ಸಾವಿರದ ೨೮೮ ಅಂಕಗಳು ದಾಖಲಾಗಿದೆ. ಇದೇ ವೇಳೆ ರಾಷ್ಟ್ರೀಯ ಸಂವೇದಿ ಸೂಚ್ಯಂಕ- ನಿಫ್ಟಿ, ೭ ಅಂಕಗಳು ಏರಿಕೆ ಕಂಡಿದ್ದು, ದಿನದ ಅಂತ್ಯಕ್ಕೆ ೨೪ ಸಾವಿರದ ೩೩೬ ಅಂಕಗಳು ದಾಖಲಾಗಿದೆ. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿಂದು ಅಮೆರಿಕನ್ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ೮೫ ರೂಪಾಯಿ ೨೫ ಪೈಸೆಯಷ್ಟಾಗಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**